**ಮೂ.ದಾ.ನಂ.48/2016**

ಪಿ.ಡಬ್ಲ್ಯು 3

(ಇಂದು ದಿನಾಂಕ: **11-03-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ.ಡಿ.ಎಸ್.ಭಟ್ಟ ವಕೀಲರಿಂದಃ**

ನಮ್ಮ ಊರು ಹೊನ್ನಾವರ ತಾಲೂಕಿನ ಕೆಕ್ಕಾರ ಗ್ರಾಮ ಆಗಿರುತ್ತದೆ. ವಾದಿಯು ನನ್ನ ತಾಯಿಯ ತಮ್ಮನಾಗಿರುತ್ತಾನೆ. ನಾನು ಕೆಕ್ಕಾರನಲ್ಲಿ ಇರುವ ನಮ್ಮ ಜಮೀನಿನಲ್ಲಿ ಕೃಷಿ ಕೆಲಸವನ್ನು ಮಾಡುತ್ತೇನೆ. ದಾವಾಸ್ತಿಯಿಂದ ನಾನು ವಾಸ ಇರುವ ಮನೆಯು ಸುಮಾರು 10 ಕಿಮೀ ಆಗಿರುತ್ತದೆ. ನನಗೆ ಒಬ್ಬ ಅಣ್ಣನಿದ್ದು ಆತನು ಬೆಂಗಳೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾನೆ. ನನಗೆ ಮದುವೆ ಆಗಿರುವುದಿಲ್ಲ. ವರ್ಷಕ್ಕೆ ನನ್ನ ಅಜ್ಜಿ ಮನೆಗೆ ಅಂದಾಜು 60 ರಿಂದ 70 ಸಲ ಬಂದು ಹೋಗುತ್ತೇನೆ. ನಾನು ಅಜ್ಜಿ ಮನೆಗೆ ಬಂದಾಗಲೆಲ್ಲಾ ಅವರ ಮನೆಯ ಲಗ್ತ ಇರುವ ಡಾಂಬರ ರಸ್ತೆಯಲ್ಲಿ ವಾಹನವನ್ನು ನಿಲಿಸಿ ಅಲ್ಲಿಂದ ಅಜ್ಜಿ ಮನೆ ಬಂದು ಹಾಗೆಯೇ ವಾಪಸ್ಸು ಹೋಗುತ್ತೇನೆ.

1ನೇ ವಾದಿಯರ ಮನೆಯಿಂದ ಅವರ ಭಾಗಾಯತ ಸ್ಥಳಕ್ಕೆ ಹೋಗಲು 1ನೇ ವಾದಿಗೆ 10 ನಿಮಿಷಗಳ ಕಾಲಾವಕಾಶ ಬೇಕಾಗುತ್ತದೆ. 1ನೇ ವಾದಿಯರ ಮನೆಯಿಂದ ಅವರ ಭಾಗಾಯತ ಸ್ಥಳ ಸುಮಾರು 250 ಮೀ ಗೂ ಮಿಕ್ಕಿ ದೂರದಲ್ಲಿ ಇರುತ್ತದೆ. 1ನೇ ವಾದಿಯರ ಮನೆ ಇರುವ ಕಪೌಂಡನಲ್ಲಿ ಒಟ್ಟೂ ಮೂರು ಮನೆಗಳು ಇರುತ್ತವೆ. ಸದ್ರಿ ಮನೆಗಳು ಸುಬ್ರಾಯ ಗಣೇಶ ಭಟ್ಟ, ಈಶ್ವರ ರಾಮ ಭಟ್ಟ ಹಾಗೂ ಸುಬ್ರಾಯ ಹರಿಹರ ಭಟ್ಟ ರವರ ಮನೆ ಇರುತ್ತದೆ. ಸದ್ರಿ ವಾಸ್ತವ್ಯದ ಮನೆಗಳು ಇರುವ ಸರ್ವೆ ನಂ. ನನಗೆ ತಿಳಿದಿಲ್ಲ. ಸದ್ರಿ ಜಾಗ ಎಷ್ಟು ಕ್ಷೇತ್ರ ಹಾಗೂ ಜಾಗಗಳು ಇವೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 1ನೇ ವಾದಿಯರಿಗೆ ಸಂಬಂಧಿಸಿದಂತೆ ಎಷ್ಟು ಭಾಗಾಯತ ಸರ್ವೆ ನಂಬರಗಳು ಇವೆ ಎಂಬ ಬಗ್ಗೆ ನನಗೆ

ತಿಳಿದಿಲ್ಲ. 1ನೇ ವಾದಿಯರ ಭಾಗಾಯತ ಸ್ಥಳದ ಸರ್ವೆ ನಂಬರ ಹಾಗೂ ಕ್ಷೇತ್ರಗಳ ಕುರಿತಾಗಿ ನನಗೆ ಯಾವುದೇ ಮಾಹಿತಿ ಇಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರಿಸಲು ನಾನು ಒಬ್ಬನೇ ಬಂದು ಮಾಹಿತಿಯನ್ನು ನೀಡಿರುತ್ತೇನೆ. ನನ್ನ ಜೊತೆ ವಕೀಲರ ಕಛೇರಿಗೆ ವಾದಿಯರು ಬಂದಿರುವುದಿಲ್ಲ. ನನಗೆ ಈ ದಾವೆಗೆ ಸಂಬಂಧಿಸಿದಂತೆ ಸಾಕ್ಷಿ ನುಡಿಯಲು ನನ್ನ ಮಾವನು ಕೇಳಿಕೊಂಡಿರುತ್ತಾರೆ. ಈ ರೀತಿಯಾಗಿ ಹೇಳುವಾಗ ನಾನು ನನ್ನ ಮಾವನ ಬಳಿ ವಕೀಲರ ಕಛೇರಿಯ ಕುರಿತು ಮಾಹಿತಿಯನ್ನು ಕೇಳಿರುವುದಿಲ್ಲ. ಏಕೆಂದರೆ ನನಗೆ ನನ್ನ ಮಾವನ ವಕೀಲರ ಕಛೇರಿಯು ಎಲ್ಲಿ ಇದೆ ಎಂದು ತಿಳಿದಿತ್ತು.

ಎನ್.ಆರ್.ರಾಘವೇಂದ್ರ ಎಂಬ ನನ್ನ ಗೆಳೆಯನ ಸೊಸಾಯಟಿಗೆ ಸಂಬಂಧಪಟ್ಟಂತ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿ ಕೇಳಲು ನನ್ನ ಮಾವನ ಕಛೇರಿಗೆ ಹೋಗಿದ್ದೇನು. ಈ ರೀತಿಯಾಗಿ ನಾನು ಈ ಪ್ರಕರಣಕ್ಕೆ ಸಾಕ್ಷಿ ನುಡಿಯುವ 1 ವರ್ಷದ ಮೊದಲು ಹೋಗಿದ್ದೇನು. ನಾನು ಈ ದಾವೆಗೆ ಸಂಬಂಧಿಸಿದಂತೆ ನನ್ನ ಮಾವನ ವಕೀಲರಿಗೆ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ತಯಾರಿಸಲು ಮಾಹಿತಿಯನ್ನು ನೀಡಲು ಒಂದು ಸಲ ಹೋಗಿರುತ್ತೇನೆ.

ಪ್ರತಿವಾದಿಯರ ಸರ್ವೆ ನಂಬರ ಹಾಗೂ ಕ್ಷೇತ್ರ ಹಾಗೂ ಅವುಗಳ ವಿಸ್ತೀರ್ಣಗಳ ಕುರಿತಾಗಿ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಸುಬ್ರಾಯ ಗಣೇಶ ಭಟ್ಟ ಇವರ ಜಾಗದ ದಕ್ಷಿಣ ದಿಕ್ಕಿಗೆ 1ನೇ ಪ್ರತಿವಾದಿಯ ಜಾಗ ಬರುತ್ತದೆ. ಪ್ರತಿವಾದಿ 3 ಹಾಗೂ 4 ರವರ ಜಾಗವು 1ನೇ ವಾದಿಯ ಪೂರ್ವ ದಿಕ್ಕಿಗೆ ಬರುತ್ತದೆ.

**ಮೂ.ದಾ.ನಂ.48/2016**

ಪಿ.ಡಬ್ಲ್ಯು 3

ಪ್ರಮಾಣ ಪತ್ರ ಸಲ್ಲಿಸುವ ಪೂರ್ವದಲ್ಲಿ ದಾವಾ ಆಸ್ತಿಗಳ ಬಗ್ಗೆಯಾಗಲೀ, ದಾವಾ ನೀರಿನ ಬಗ್ಗೆಯಾಗಲೀ, ಹಾಗೂ ದಾವಾ ದಾರಿಯ ಬಗ್ಗೆಯಾಗಲೀ ನಾನು 1ನೇ ವಾದಿಯೊಂದಿಗೆ ಯಾವುದೇ ಚರ್ಚೆಯನ್ನು ಮಾಡಿರುವುದಿಲ್ಲ. ಈ ಕುರಿತಾಗಿ ನನಗೆ ಮೊದಲಿನಿಂದಲೂ ಮಾಹಿತಿಯು ಇರುತ್ತದೆ. ನಾನು ನನ್ನ ಅಜ್ಜಿಯ ಮನೆಗೆ ನಾನು ಚಿಕ್ಕವನಿದ್ದಾಗ ಬೇಸಿಗೆ ರಜೆಗೆ ಹೋದಾಗ ಅವರ ತೋಟಗಳಿಗೆ ಹೋಗಿ ಬರುತ್ತಿದ್ದೇನು.

ವಾದಿಯರ ಮನೆಯಿಂದ ಅವರ ಭಾಗಾಯತ ಸ್ಥಳಕ್ಕೆ ಹೋಗಲು ಯಾವ ಯಾವ ಸರ್ವೆ ನಂಬರಗಳಲ್ಲಿ ದಾರಿ ಹೋಗುತ್ತದೆ ಎಂದು ನನಗೆ ಗೊತ್ತಿಲ್ಲ. ಆದರೆ ಯಾರ ಯಾರ ಜಾಗದಲ್ಲಿ ಹೋಗುತ್ತದೆ ಎಂದು ನನಗೆ ತಿಳಿದಿದೆ.

ವಾದಿಯರ ಜಾಗದಿಂದ ಬಲಕ್ಕೆ ತಿರುಗಿ ನಾಗೇಶ ವೆಂಕಟರಮಣ ಭಟ್ಟ ಇವರ ಜಾಗದಲ್ಲಿ ಸ್ವಲ್ಪ ದೂರ ಹೋಗಿ ಎಡಕ್ಕೆ ತಿರುಗಿ, 1 ಹಾಗೂ 2 ಪ್ರತಿವಾದಿಯರ ಜಾಗ ಹಾಗೂ 2ನೇ ವಾದಿಯ ಜಾಗದ ಗಡಿಯ ದನಪೆಯ ಮೂಲಕ ಮೆಟ್ಟಿಲನ್ನು ಇಳಿದು ನೀರಿನ ಕಾಲುವೆಯಲ್ಲಿ ಸ್ವಲ್ಪ ಮುಂದೆ ಹೋಗಿ, 1 ಹಾಗೂ 2ನೇ ಪ್ರತಿವಾದಿಯರ ಜಾಗದಲ್ಲಿ 2ನೇ ವಾದಿಯರ ಜಾಗದಲ್ಲಿ ಹೋಗಿ 1ನೇ ವಾದಿಯ ಜಾಗ ಇದೆ. ಮುಂದೆ ಹೋಗಿ ಚಿಕ್ಕೆರಹಳ್ಳದ ಸಂಕವನ್ನು ದಾಟಿ 5ನೇ ಪ್ರತಿವಾದಿಯರ ಜಾಗದ ಕಾಲುದಾರಿಯಲ್ಲಿ ಸಾಗಿ ಗೋಪಿಹಳ್ಳದ ಆರ್.ಸಿ.ಸಿ. ಸಂಕವನ್ನು ದಾಟಿ 3ನೇ ವಾದಿ ಹಾಗೂ 2ನೇ ವಾದಿಯರ ಜಾಗಕ್ಕೆ ಸೇರುತ್ತದೆ.

ನಾನು ಈ ಮೇಲೆ ಹೇಳಿದಂತೆಯೇ ನನ್ನ ವಕೀಲರಿಗೆ ಸಹ ಮಾಹಿತಿಯನ್ನು ನೀಡಿರುತ್ತೇನೆ. ನೀರಿನ ಲೈನ್ ವಾದಿಯರ ಭಾಗಾಯತ ಸ್ಥಳದಲ್ಲಿ ಇರುವ ಬಾವಿಯಿಂದ 3 ಹಾಗೂ 4ನೇ ಪ್ರತಿವಾದಿಯರ

ಜಾಗದಲ್ಲಿ ದಾಟಿ ಬಂದು 2ನೇ ವಾದಿಯ ಜಾಗದಲ್ಲಿ ಟೀ ಪೈಪನ್ನು ಅಳವಡಿಸಿ ಅದರ ಮುಖಾಂತರ 2ನೇ ವಾದಿಯ ಜಾಗಕ್ಕೆ ಹಾಗೂ ವಿನಾಯಕ ಎಂಬುವವರ ಜಾಗದ ಮೂಲಕ 1ನೇ ವಾದಿಯರ ಜಾಗಕ್ಕೆ ಬರುತ್ತದೆ.

1 ಹಾಗೂ 2ನೇ ಪ್ರತಿವಾದಿಯರ ಜಾಗದಲ್ಲಿ ಮುಂದೆ ಹೋಗಿ ಈ ಮೇಲೆ ಹೇಳಿದ ಕಾಲು ದಾರಿಯ ಮುಖಾಂತರ ಮುಂದೆ ಹೋಗಿ 1ನೇ ವಾದಿಯರ ತೋಟಕ್ಕೆ ಹೋಗುತ್ತದೆ. ನಾನು ಈ ಮೇಲೆ ಹೇಳಿದ ನೀರಿನ ಪೈಪಲೈನ್ ಪ್ರಾರಂಭದಿಂದ ಕೊನೆಯವರೆಗೂ ಒಂದೇ ಪೈಪಲೈನ್ ಮುಖಾಂತರ ಹರಿದು ಹೋಗುತ್ತದೆ. ನಾನು ನೀರಿನ ಪೈಪ್ ಲೈನನ ಕುರಿತಾಗಿ ಹಾಗೂ ನೀರಿನ ಪೂರೈಕೆಯ ಕುರಿತಾಗಿ ಈಗ ಸಾಕ್ಷಿ ವಿಚಾರಣೆಯಲ್ಲಿ ಹೇಳಿದಂತೆ ವಕೀಲರಿಗೆ ಮಾಹಿತಿಯನ್ನು ನೀಡಿ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ.

ಈ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಂದುದಿಂದ ಆಯುಕ್ತರು ನೇಮಕಗೊಂಡಂತಹ ಸಮಯದಲ್ಲಿ ಅವರು ಸ್ಥಳ ಪರೀಲನೆಗೆ ಬಂದಾಗ ನಾನು ಕೂಡ ಸ್ಥಳದಲ್ಲಿ ಇದ್ದೇನು. ನಾನು ಸದ್ರಿ ಸಂದರ್ಭದಲ್ಲಿ ನಾನು ನಮ್ಮ ಊರಿನಿಂದ ಒಬ್ಬ ಕೂಲಿ ಕಾರ್ಮಿಕನನ್ನು ಕರೆದುಕೊಂಡು ಬಂದಿರುತ್ತೇನೆ. ನನ್ನ ಮಾವನವರು ನನಗೆ ಕೂಲಿ ಕಾರ್ಮಿಕರನ್ನು ಕರೆದುಕೊಂಡು ಬಾ ಎಂದು ಹೇಳಿದ್ದರು. ಮಾನ್ಯ ನ್ಯಾಯಾಲಯದ ಆಯುಕ್ತರು ದಾವಾ ಸ್ಥಳಕ್ಕೆ ಬಂದಾಗ ಪಕ್ಷಗಾರರ ಮಾಹಿತಿಯಂತೆ ದಾವಾ ಸ್ಥಳದಲ್ಲಿ ಪೈಪಲೈನನ ಆಸ್ತಿತ್ವದ ಕುರಿತಾಗಿ ಅಲ್ಲಲ್ಲಿ ಅಗೆದು ನೋಡಿರುತ್ತಾರೆ. ಸಾಕ್ಷಿಯು ಮುಂದುವರಿದು ನ್ಯಾಯಾಲಯದ ಆಯುಕ್ತರು ದಾವಾ ಸ್ಥಳಕ್ಕೆ ಬರುವ ಪೂರ್ವದಲ್ಲಿ ಪೈಪಗಳನ್ನು ಕಡಿದು ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಸದ್ರಿ ಪೈಪಲೈನಗಳ್ಳು ಕಡಿದಿರುವುದನ್ನು ಕಣ್ಣಾರೆಯಾಗಿ ನೋಡಿರುವುದಿಲ್ಲ. ಕಮೀಷನರ ಬರುವ ಎಷ್ಟು ಸಮಯದ ಮೊದಲು ಸದ್ರಿ ಪೈಪಲೈನಗಳನ್ನು ಕಡಿದಿರುತ್ತಾರೆ ಎಂಬ ಬಗ್ಗೆ ನನಗೆ ಯಾವುದೇ ಮಾಹಿತಿ

**ಮೂ.ದಾ.ನಂ.48/2016**

ಪಿ.ಡಬ್ಲ್ಯು 3

ಇರುವುದಿಲ್ಲ. 1ನೇ ವಾದಿಯು ಸದ್ರಿ ಪೈಪಲೈನಗಳನ್ನು ಕಡಿದ ಕುರಿತಾಗಿ ನನಗೆ ತಿಳಿಸಿರುತ್ತಾರೆ. ನ್ಯಾಯಾಲಯದಿಂದ ಆಯುಕ್ತರು ಬಂದಂತಹ ಸಂದರ್ಭದಲ್ಲಿ ನೀರಿನ ಪೈಪಲೈನಗಳ ಆಸ್ತಿತ್ವ ಹಾಗೂ ಸ್ಥಿತಿಗತಿಗಳ ಕುರಿತಾಗಿ ಅವರ ವರದಿಯಲ್ಲಿ ನಮೂದು ಮಾಡುತ್ತಾರೆ. ನಾನು ನ್ಯಾಯಾಲಯದಿಂದ ಆಯುಕ್ತರು ನೀಡಿದ ವರದಿಯನ್ನು ನೋಡಿರುವುದಿಲ್ಲ. ಅವರು ದಾವಾ ಸ್ಥಳದಲ್ಲಿ ಪಕ್ಷಗಾರರ ಸೂಚನೆಯಂತೆ ತಾವು ಪರೀಶಿಲಿಸಿದ ವಿವರಗಳನ್ನು ಪಾಯಿಂಟ್ ಮಾಡಿಕೊಂಡು ಅದರಂತೆ ವರದಿಯನ್ನು ಸಲ್ಲಿಸುತ್ತೇನೆ ಎಂದು ನುಡಿಯುತ್ತಾರೆ.

ವಾದಿಯರಿಗೆ ಪ್ರತಿವಾದಿಯರ ಜಾಗದಲ್ಲಿ ತಿರುಗಾಡುವ ದಾರಿಯಿಲ್ಲ ನೀರಿನ ಪೈಪಲೈನ್ ಕೂಡ ಇಲ್ಲ ಎಂದರೆ ಸರಿಯಲ್ಲ. ವಾದಿಯ ಹಾಗೂ ಪ್ರತಿವಾದಿಯರ ಸ್ಥಳದ ಕುರಿತಾಗಿ ನನಗೆ ಯಾವುದೇ ಸ್ಪಷ್ಟವಾಗಿ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ವಾದಿಯರ ಮನೆಗೆ ಹೋದಂತಹ ಸಂದರ್ಭದಲ್ಲಿ ಅವರ ಭಾಗಾಯತ ಸ್ಥಳಕ್ಕೆ ಹೋದದ್ದು ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿದಂತೆ ಯಾವುದೇ ಕಾಲು ದಾರಿ ಹಾಗೂ ನೀರಿನ ಕಾಲುವೆ ಆಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. 1ನೇ ವಾದಿ ನಮ್ಮ ತಾಯಿಯ ಸಹೋದರನಾಗಿರುವುರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ